## ಪದಬಂಧ



**ಎಡದಿಂದ ಬಲಕ್ಕೆ**

1. ಪ್ರಸಾದವನ್ನು ಸ್ವೀಕರಿಸಲು ಬರುವಾಗ ಅಲಂಕಾರ ಸಾಮಗ್ರಿ ಏಕೆ? 4
3. ಮಣೆಯದವರನ್ನೆಲ್ಲ ಬಗ್ಗುಬಡಿಯಲು ನಡೆಯಿತು ಕಗ್ಗೊಲೆ 3
4. ಅದರ ಗೊಡವೆಗೆ ಹೋಗಲೇಬೇಡಿ ; ಅದು ಮಂಗಗಳ ಯಜಮಾನ 3
6. ವಂಚನೆ ಮಾಡಲು ಬಂದವರನ್ನು ಹಿಮ್ಮೆಟ್ಟಿಸಿದ್ದು ಒಂದು ಕಾಡುಪ್ರಾಣಿ 4
7. ವೈಚಾರಿಕತೆಯನ್ನು ಬಿಂಬಿಸುವ ಪದ್ಯ ಇದು 3
9. ನಸುಕಿನಲ್ಲಿ ಆತ ಕಂಡಿದ್ದೆಲ್ಲ ಕೇವಲ ಒಂದು ನಿದ್ರಾ ಚಿತ್ರ 3
11. ತಂಬೆಲರಿನ ಜತೆ ತೇಲಿ ಬರುತ್ತಿರುವುದು ಯಾವ ತಾಳವಾದ್ಯದ ಸದ್ದು? 3
13. ಕಲಿತಿದ್ದೇನೆಂದು ಸೂಚಿಸಲು ಎಳ್ಳಿನಾಕಾರದ ಬೊಟ್ಟು 3
15. ಹಗರಣಕ್ಕೆ ಕಾರಣರಾದವರೆಲ್ಲ ಸೇರಿದ್ದಾರೆ ಜೈಲು 4
17. ಮುಂದಿನ ಕಷ್ಟಗಳನ್ನೆಲ್ಲ ನೆನೆನೆದು ಇಷ್ಟೆಲ್ಲ ದುಃಖ 3
18. ನಿತ್ಯವೂ ಮಾರುವ ವರ್ತನೆ ಕೈಗೊಳ್ಳಬೇಕೆಂದು ತೀವ್ರ ಒತ್ತಾಯ 3
19. ಕಾಲೆಳೆಯುವವರೇ ಹೆಚ್ಚುತ್ತಿರುವ ಕುರಿತು ಈ ಚಿಂತೆ 4

**ಮೇಲಿನಿಂದ ಕೆಳಕ್ಕೆ**

1. ವಿಪ್ರರಿಗೆ ಹಣ ಕೊಟ್ಟು ಕಲಿತದ್ದು ಓಂಕಾರ 3
2. ಗಣ್ಯ ಜನರನ್ನೆಲ್ಲ ಆಕರ್ಷಿಸಿದ್ದು ಇದೇ ಶಹರ ತಾನೇ? 3
3. ಮಧುರವಷ್ಟೇ ಅಲ್ಲ; ಆಕೆಯ ಭಾವನೆಗಳು ಪ್ರೀತಿಯುಕ್ತ ಕೂಡ 3
5. ವ್ಯಾಸಂಗ ನಿರತರಿಗೆ ಸೂಕ್ತವಾದ ಸರಳ ಉಡುಗೆ 3
7. ತುರಗವನ್ನೇರಿ ಓಡಿಸುವ ವಿದ್ಯೆ ಆಕೆಗೆ ಕೈಗೂಡಿದೆ 4
8. ಕಾವಲಿನ ಜನರನ್ನೇ ನಂಬಲಾಗದ ಹೊಸ ಸಮಯ ಬಂದಿದೆ 4
9. ಮರಕ್ಕೆ ಹತ್ತಿಳಿವಲ್ಲಿ ಆತನದು ಭಾರೀ ಕೈಚಳಕ 4
10. ಸಾಧಾರಣ ಕೆಲಸಗಳ ನಿರ್ವಹಣೆಯನ್ನೂ ಉತ್ತಮಗೊಳಿಸಿದವ ಈತ 4
12. ಬರಗಾಲದ ಬೆದರಿಕೆ ಬಂದೊಡನೆ ಇಡೀ ಊರೇ ಖಾಲಿ! 3
14. ತೇಲಲೆಂದು ಬಿಡುವಂತಿಲ್ಲ; ಆ ವಸ್ತು ತುಂಬ ಸುಂದರ 3
15. ಕಾರಕೂನನ ಕೈಯಲ್ಲಿನ ಲೆಕ್ಕಣಿಕೆ ಚಿನ್ನದಿಂದ ಮಾಡಿದ್ದು 3
16. ಹೊಳೆವ ವಸ್ತುಗಳ ನಡುವೆ 'ಕಡಲಿನ ರತ್ನ'ವೂ ಒಂದಿದೆ ನೋಡಿ 3

### 11–01–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಪ್ರಹಾರ 3. ಆಲೇಖ 4. ಸಿಡುಕ 6. ರಕ್ಷಕ 7. ವಿನಾಯಕ 9. ಭವಬಂಧ 11. ಸುಪ್ರಭಾತ 13. ರಮಾಪತಿ 15. ಮುನಿಸು 17. ಕರಿದು 18. ಮರುಕ 19. ಕದನ

**ಮೇಲಿನಿಂದ ಕೆಳಕ್ಕೆ**

1. ಪ್ರಖರ 2. ರಸಿಕ 3. ಆಲಯ 5. ಕಕವ 7. ವಿಶ್ರಮಿಸು 8. ಕಲಾವಿದ 9. ಭಯಂಕರ 10. ಧನಪತಿ 12. ಭಾಜಕ 14. ಮಾದಕ 15. ಮುದುಕ 16. ಸುಮನ

ಪ್ರಶ್ನಾಂಕಣ

# ಪಾಯಿಂಟ್ ನೀಮೋ: ಏನು ವಿಶೇಷ?

ಪಾಯಿಂಟ್ ನೀಮೋ ಅದು ನಮ್ಮ ಧರೆಯ ಮೇಲಿನದೇ ಒಂದು ಪ್ರಸಿದ್ಧ ಸ್ಥಳ (ಭೂಪಟದಲ್ಲಿ ಬಾಣದ ಗುರುತು ಸೂಚಿಸುತ್ತಿರುವ ಸ್ಥಳ). ಸ್ಪಷ್ಟವಾಗಿ ಹೇಳಬೇಕೆಂದರೆ ಅದು ದಕ್ಷಿಣ ಪೆಸಿಫಿಕ್ ಸಾಗರದ ಮೇಲೆ ಗುರುತಿಸಲಾಗಿರುವ ನೆಲರಹಿತವಾಗಿರುವ, ಹಾಗಾಗಿ ಜನ ರಹಿತವೂ ಆಗಿರುವ, ಒಂದು ಸ್ಥಳ. ನೆಲದ ಮೇಲಾಗಲೀ, ಸಾಗರಾವಾರದ ಮೇಲಾಗಲೀ ಬೇರಾವ ಪ್ರದೇಶಕ್ಕೂ ಇಲ್ಲದ ಈ ಸ್ಥಳದ ವೈಶಿಷ್ಟ್ಯಗಳನ್ನು ಗಮನಿಸಿ:

ಭೂಮಿಯ ಇಡೀ ನೆಲಾವಾರದ ಯಾವುದೇ ಪ್ರದೇಶದಿಂದಲೂ ಅತ್ಯಂತ ಹೆಚ್ಚಿನ ದೂರದ ನೆಲೆ ಎಂಬುದೇ ಪಾಯಿಂಟ್ ನೀಮೋದ ವಿಶ್ವದಾಖಲೆಯ ಪ್ರಥಮ ಪರಮ ವಿಶೇಷ. ಇಲ್ಲಿಗೆ ಅತ್ಯಂತ ಹತ್ತಿರದ ನೆಲ ಪ್ರದೇಶವಾದ ಜನ ರಹಿತ ಡ್ಯೂಸ್ ದ್ವೀಪ ಇಲ್ಲಿಂದ 2704.8 ಕಿ.ಮೀ ದೂರದಲ್ಲಿದೆ; ಮಾನವ ಸಹಿತವಾದ ಸ್ಥಳವಾಗಿರುವ ಈಸ್ಟರ್ ದ್ವೀಪ ಪಾಯಿಂಟ್ ನೀಮೋದಿಂದ 3540 ಕಿ.ಮೀ ದೂರದಲ್ಲಿದೆ!

ಪಾಯಿಂಟ್ ನೀಮೋಗೆ ಅತ್ಯಂತ ಹತ್ತಿರದ ಮನುಷ್ಯರೆಂದರೆ 'ಅಂತರ ರಾಷ್ಟ್ರೀಯ ವ್ಯೋಮ ನಿಲ್ದಾಣ'ದಲ್ಲಿರುವ(International Space Station ISS) ವ್ಯೋಮ ಯಾತ್ರಿಗಳು ಮಾತ್ರ! ನೆಲದಿಂದ 400 ಕಿ.ಮೀ. ಎತ್ತರದಲ್ಲಿ ಭೂಮಿಯನ್ನು ನಿರಂತರ ಪರಿಭ್ರಮಿಸುತ್ತಿರುವ ಐ.ಎಸ್.ಎಸ್ ಹಾಗೆ ಭೂಮಿಯನ್ನು ಸುತ್ತುತ್ತ ಪ್ರತಿ ಬಾರಿ ಪಾಯಿಂಟ್ ನೀಮೋದ ನೇರದಲ್ಲಿ ಬಂದಾಗಲೂ ಅದನ್ನು ದಾಟುವವರೆಗೆ ಅಲ್ಪ ಕಾಲ ಪಾಯಿಂಟ್ ನೀಮೋದ ಅತ್ಯಂತ ಸನಿಹದ ನಿರ್ಮಿತಿ ಆಗಿರುತ್ತದೆ. ಪಾಯಿಂಟ್ ನೀಮೋ ಪ್ರಧಾನ ಸಾಗರ ಸುಳಿಗಳಲ್ಲೊಂದಾದ (Ocean Gyre) ದಕ್ಷಿಣ ಪೆಸಿಫಿಕ್ ಸುಳಿಯ ಸನಿಹದಲ್ಲಿದೆ. ಹಾಗಾಗಿ ಸಾಗರ ಪ್ರವಾಹಗಳು (Ocean Currents) ತಮ್ಮೊಡನೆ ಹೊತ್ತು ಸಾಗಿಸಿ ತರುವ ಜೀವಿ ಪೋಷಕಾಂಶಗಳು ಅಲ್ಲಿಗೆ ತಲುಪುವುದಿಲ್ಲ; ಅಲ್ಲಿ ಉಳಿಯುವುದಿಲ್ಲ. ತತ್ಪರಿಣಾಮವಾಗಿ ಪಾಯಿಂಟ್ ನೀಮೋ ಪ್ರದೇಶದಲ್ಲಿ ಸಾಗರ ಜೀವಿಗಳ ಅಸ್ತಿತ್ವ ಅತ್ಯಂತ ಕಡಿಮೆ; ಇಲ್ಲವೇ ಇಲ್ಲ ಎನ್ನಬಹುದಾದಷ್ಟು ಕಡಿಮೆ.




ಜನರಹಿತ ಪಾಯಿಂಟ್ ನೀಮೋ ಭೂ ನೆಲದ ಯಾವುದೇ ಪ್ರದೇಶದಿಂದ ಅತ್ಯಂತ ದೂರದ ಏಕಾಂಗಿ ನೆಲೆಯಾದ್ದರಿಂದ ಅದನ್ನು ವ್ಯೋಮ ನೌಕೆಗಳ ಸ್ಮಶಾನವನ್ನಾಗಿ 1971ರಿಂದ ಬಳಸಲಾಗುತ್ತಿದೆ! ಭಗ್ನವಾದ, ನಿಷ್ಕ್ರಿಯವಾದ ಮತ್ತು ಮೃತವಾದ ವ್ಯೋಮ ನೌಕೆಗಳನ್ನು, ಕೃತಕ ಉಪಗ್ರಹಗಳನ್ನು ಮತ್ತು ಅಂತರಿಕ್ಷ ಕಸದ ಬೃಹತ್ ತುಂಡುಗಳನ್ನು ಇಲ್ಲಿಗೆ ಬಂದು ಬೀಳುವಂತೆ ಮಾಡಲಾಗುತ್ತಿದೆ (ಚಿತ್ರ 1, 2). 2028ರ ವೇಳೆಗೆ ನಿಷ್ಕ್ರಿಯವಾಗಲಿರುವ ಐ.ಎಸ್.ಎಸ್ ಕೂಡ ಇದೇ ಪಾಯಿಂಟ್ ನೀಮೋಗೇ ಬಿದ್ದು ಜಲಸಮಾಧಿಯಾಗಲಿದೆ!

■ ಎನ್. ವಾಸುದೇವ್